> ಸುಮಾರು ಏಳರ ಆಸುಪಾಸಿನಲ್ಲಿ ಲೂಸಿಯ ಕೊಲೆ ಮಾಡಿ, ಬೆಡ್‌ರೂಮಿನಲ್ಲಿ ಮಲಗಿಸಿ, ಏ.ಸಿ. ಆನ್ ಮಾಡಿದ್ದಾರೆ. ಕೆಲವೇ ಕ್ಷಣಗಳಲ್ಲಿ ಇಡೀ ರೂಮು ಶೈತ್ಯಾಗರದಂತೆ ತಂಪಾಗಿದೆ. ಇದರಿಂದಾಗಿ ಶವ ಬಿಗುವಾಗುವ ಪ್ರಕ್ರಿಯೆ ನಿಧಾನವಾಗಿದೆ. ಶವ ಪರೀಕ್ಷೆ ಮಾಡಿದಾಗ ಇದೇ ಕಾರಣದಿಂದ ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ಮರಣದ ಸಮಯ ಸರಿಯಾಗಿ ನಿಗದಿಯಾಗಿಲ್ಲ.

"ನೀವು ಕಾರ್ ತಂದಮೇಲೆ ಬಿಜು ಮನೆಯಿಂದ ಹೊರಬಂದರಾ?"

ಡಿಮೆಲೋಗೆ ಯಾಕೆ ಈ ಪ್ರಶ್ನೆಗಳು ಎಂದು ಅರ್ಥವಾಗಲಿಲ್ಲ.

"ಇಲ್ಲ ಸರ್, ನಾನು ಬರುವಹೊತ್ತಿಗೆ ಬಿಜು, ಬ್ಯಾಗ್ ಹಿಡಿದು ಹೊರಗೆ ನಿಂತಿದ್ದ."

ಮತ್ತೆ ಜೀವನ್ ಕಡೆ ತಿರುಗಿದ ರುದ್ರೇಶ್, "ಜೀವನ್ ನಿಮ್ಮ ಹೇಳಿಕೆ ಪ್ರಕಾರ, ಬಿಜು ಹೇಳಿದಂತೆ ಬಾಲ್ಕನಿಯ ಕಿಟಕಿ ಬಾಗಿಲು ಒಡೆದು ಒಳಬರಲು ನೋಡಿದಿರಿ, ಆದರೆ ಬಾಲ್ಕನಿಯ ಕಿಟಕಿ ಬಾಗಿಲು ತೆರೆದೇ ಇತ್ತು..."

ಅವನು ತಲೆ ಅಲುಗಿಸಿದ.

"ಏನು ನಡೀತಾ ಇದೆ ಇಲ್ಲಿ? ಕೋಟ್ಯಧಿಪತಿ ಕಾರ್ಯಕ್ರಮದ ಪ್ರಶ್ನೋತ್ತರನಾ... ನನ್ನನ್ನು ಇಲ್ಲಿಗೆ ಕರೆಸಿದ್ದು ಲೂಸಿಯ ಕೊಲೆಗಾರ ಸಿಕ್ಕಿದ್ದಾನೆ, ತೋರಿಸುತ್ತೇವೆ ಅಂತ ಹೇಳಿ. ಇಲ್ಲಿ ನೀವು ನೋಡಿದರೆ?..." ಎತ್ತರದ ಧ್ವನಿಯಲ್ಲಿ ಕೂಗಿದ ಬಿಜು. ಅವನ ಮಾತುಗಳನ್ನು ನಿರ್ಲಕ್ಷಿಸಿ ರುದ್ರೇಶ್ ಮತ್ತೆ ಪ್ರಶ್ನಿಸಿದ.

"ಅಂದರೆ, ಆ ಕಿಟಕಿಯಲ್ಲಿ ಕೈ ಹಾಕಿ ಬಾಗಿಲುತೆರೆಯಬಹುದು ಎಂದಾದರೆ, ಕೈ ಹಾಕಿ ಬಾಗಿಲು ಹಾಕಲೂಬಹುದು ಅಲ್ಲವಾ ಜೀವನ್?"

"ಹೌದು ಸರ್..."

"ಅಂದರೆ, ನಾವು ಹೋದಮೇಲೆ, ಜೀವನ್, ಲೂಸಿಯನ್ನು ಕೊಲೆ ಮಾಡಿ, ಬಾಲ್ಕನಿಯ ಬಾಗಿಲಿನಿಂದ ಹೊರಬಂದು, ಕಿಟಕಿಯ ಮುಖಾಂತರ ಕೈ ಹಾಕಿ ಬಾಗಿಲನ್ನು ಹಾಕಿ ಹೋಗಿದ್ದಾನಾ?"

ಬಿಜು ಆವೇಶದಿಂದ ಪ್ರಶ್ನಿಸಿದ.

"ಇಲ್ಲ ಇಲ್ಲ... ಕೊಲೆಗಾರ, ಲೂಸಿಯನ್ನು ಕೊಲೆಮಾಡಿ, ಬಾಲ್ಕನಿಯ ಬಾಗಿಲನ್ನು ಆ ಕಿಟಕಿಯಿಂದ ಕೈ ಹಾಕಿ ಚಿಲಕ ಹಾಕಿ... ಹೊರಹೋಗಿದ್ದಾನೆ."

"ನಾನು ಹೇಳಿದ್ದೂ ಅದೇ..."

"ನೀವು ಹೇಳಿದ್ದು ಜೀವನ್ ಅಂತ. ನಾನು ಹೇಳಿದ್ದು ಕೊಲೆಗಾರ ಅಂತ... ಎರಡಕ್ಕೂ ವ್ಯತ್ಯಾಸ ಇದೆ."

"ಅಂದರೆ, ಜೀವನ್ ಮಾಡಿಲ್ಲವಾ, ಮತ್ತೆ ಯಾರು ಮಾಡಿರುವುದು?" ತೊದಲಿದ ಬಿಜು.

"ಅದು ನೀವೇ ಯಾಕೆ ಆಗಿರಬಾರದು?"

ಮೂವರೂ ಒಂದುಕ್ಷಣ ಸ್ತಬ್ಧರಾದರು.

"ನಿಮಗೇನಾದರೂ ತಲೆ ಕೆಟ್ಟಿದೆಯಾ?" ಅಬ್ಬರಿಸುತ್ತಾ ಎದ್ದು ನಿಂತ ಬಿಜು,